**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 18 ಪ್ರಾ.ಸಾ. : 18**

ಸಾಕ್ಷಿಯ ಹೆಸರು : ಟಿ. ನಾಗೇಶಶೆಟ್ಟಿ
ತಂದೆಯ ಹೆಸರು : ಲಿಂಗಪ್ಪ ಶೆಟ್ಟಿ
ವಯಸ್ಸು : 65 ವರ್ಷ
ಉದ್ಯೋಗ : ನಿವೃತ್ತ ಆರಕ್ಷಕ ಉಪಾಧೀಕ್ಷಕರು
ವಾಸ : ಮಂಗಳೂರು

**ದಿನಾಂಕಃ 06-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ದಿನಾಂಕ 15.10.2013 ರಿಂದ 26.11.2014 ರವರೆಗೆ ಕಾರವಾರ ಲೋಕಾಯುಕ್ತ ಠಾಣೆಯಲ್ಲಿ ಆರಕ್ಷಕ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 15.10.2013 ರಂದು ಈ ಕೇಸಿನ ಕಡತವನ್ನು ಆರಕ್ಷಕ ಉಪಾಧೀಕ್ಷಕ ದೋಸಾ-17 ರವರಿಂದ ಪಡೆದುಕೊಂಡು ಕಡತವನ್ನು ಪರಿಶೀಲನೆ ಮಾಡಿ ಕೃತ್ಯ ಸ್ಥಳಕ್ಕೆ ಭೇಟಿ ನೀಡಿದೆ . ದಿನಾಂಕ 28.10.2013 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಕುಮಟಾರವರಿಗೆ ಕೃತ್ಯ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ಪತ್ರವನ್ನು ಬರೆದೆ . ದಿನಾಂಕ 03.12.2013 ರಂದು ಪಂಚರಾದ ದೋಸಾ-2 ರವರನ್ನು ದಿನಾಂಕ 04.12.2013 ರಂದು ತನಿಖೆ ಬಗ್ಗೆ ನನ್ನ ಕಚೇರಿಗೆ ಕಳುಹಿಸಿಕೊಡುವಂತೆ ಸಹಾಯಕ ವಾಣಿಜ್ಯ ತೆರಿಗೆ ಆಯುಕ್ತರು ಕಾರವಾರರವರಿಗೆ ಪತ್ರವನ್ನು ಬರೆದೆ . ದಿನಾಂಕ 04.12.2013 ರಂದು ಮಂಜುನಾಥ ಹೆಗಡೆ , ಸಹಾಯಕ ಅಭಿಯಂತರರು , ಲೋಕೋಪಯೋಗಿ ಇಲಾಖೆ ಕುಮಟಾರವರು ಸ್ಥಳದ ನಕಾಶೆಯನ್ನು ತಯಾರಿಸಿದರು. ಈ ಸಮಯದಲ್ಲಿ ದೋಸಾ-2 ರವರು ಸ್ಥಳವನ್ನು ಅವರಿಗೆ ತೋರಿಸಿದರು. ದೋಸಾ-2 ರವರ ಮರುಹೇಳಿಕೆಯನ್ನು ಅದೇ ದಿನ ಪಡೆದುಕೊಂಡೆ . ದಿನಾಂಕ 26.12.2013 ರಂದು ನಮ್ಮ ಠಾಣೆಯ ಮುಖ್ಯ ಪೇದೆ ದೋಸಾ-6 ರವರು ಧಾರವಾಡ ಪ್ರಾದೇಶಿಕ ವಿಧಿ ವಿಜ್ಞಾನ ಪ್ರಯೋಗಾಲಯದಿಂದ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ತಂದು ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡೆ ಹಾಗೂ ದೋಸಾ-6 ರವರ ಮರುಹೇಳಿಕೆಯನ್ನು ಪಡೆದುಕೊಂಡೆ . ದಿನಾಂಕ 17.01.2014 ರಂದು ಪಂಚರಾದ

ದೋಸಾ-2 ಮತ್ತು ದೋಸಾ-3 ರವರನ್ನು ದಿನಾಂಕ 18.01.2014 ರಂದು ತನಿಖೆ ಕುರಿತು ಠಾಣೆಗೆ ಕಳುಹಿಸಿಕೊಡುವಂತೆ ಅವರ ಇಲಾಖೆಯ ಮುಖ್ಯಸ್ಥರಿಗೆ ಪತ್ರವನ್ನು ಬರೆದು ಕಳುಹಿಸಿದೆ. ದಿನಾಂಕ 18.01.2014 ರಂದು ಈ ಕೇಸಿನ ಫಿರ್ಯಾದಿ ಟ್ರ್ಯಾಪ್ ಕಾಲಕ್ಕಿಂತ ಮುಂಚೆ ಆರೋಪಿಯೊಂದಿಗೆ ನಡೆಸಿದ ಮೊಬೈಲ್ ದೂರವಾಣಿ ಸಂಭಾಷಣೆಯನ್ನು ಸಿ.ಡಿ. ಗೆ ಪರಿವರ್ತಿಸಿ ಈ ದಿನ ಠಾಣೆಯಲ್ಲಿ ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ಠಾಣೆಯ ಲ್ಯಾಪಟಾಪ್ ನಲ್ಲಿ ಹಾಕಿ ಆಲಿಸಿ ಪಂಚನಾಮೆಯನ್ನು ತಯಾರಿಸಿದೆ . ಅದರಲ್ಲಿ 7 ನಿಮಿಷ 16 ಸೆಕೆಂಡ್ ನ ಸಂಭಾಷಣೆ ಇತ್ತು . ನಂತರ ದೋಸಾ-2 ರವರಿಗೆ ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ನೀಡಿದ A ಆಂಗ್ಲ ಅಕ್ಷರದ ಸೀಲ್ ಅನ್ನು ಅವರು ಆ ಸಮಯದಲ್ಲಿ ಹಾಜರುಪಡಿಸಿದ್ದು ಸದರಿ ಸಿ.ಡಿ. ಯನ್ನು ಪ್ಯಾಕ್ ಮಾಡಿ ಅದರ ಮೇಲೆ A ಆಂಗ್ಲ ಅಕ್ಷರದ ಸೀಲ್ ನಿಂದ ಸೀಲ್ ಮಾಡಿ ಅದರ ಮೇಲೆ ಪಂಚರು , ಫಿರ್ಯಾದಿ ಹಾಗೂ ನನ್ನ ಸಹಿಯನ್ನು ಮಾಡಿ ವಸ್ತು ಸಂ. 10 ಎಂದು ಗುರುತಿಸಿದೆ . ಒಟ್ಟು ಎರಡು ಸಿ.ಡಿ. ತಯಾರಿಸಿ ಒಂದು ಸಿ.ಡಿ. ಯನ್ನು ಕಡತದಲ್ಲಿ ಇಟ್ಟುಕೊಂಡೆ. ಈ ಪಂಚನಾಮೆಯನ್ನು ಠಾಣೆಯಲ್ಲಿ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 2.30 ಗಂಟೆವರೆಗೆ ತಯಾರಿಸಿದ್ದು ಠಾಣೆಯ ಸಿ ಪಿ ಸಿ ದೋಸಾ-9 ರವರು ಲ್ಯಾಪಟಾಪ್ ನಲ್ಲಿ ಬೆರಳಚ್ಚು ಮಾಡಿದರು. ಈ ಸಿ.ಡಿ. ಯನ್ನು ಠಾಣೆಯ ಮಾಲುಪಟ್ಟಿ ಸಂ. 1/2014 ರಲ್ಲಿ ಅಳವಡಿಸಿ ನ್ಯಾಯಾಲಯದ ಅನುಮತಿಯನ್ನು ಕೋರಿದೆ .

(ಈ ಹಂತದಲ್ಲಿ ನ್ಯಾಯಾಲಯದ ಸಮಯಾವಕಾಶ ಮುಗಿದಿದ್ದರಿಂದ ಮಧ್ಯಾಹ್ನ 2.45 ಗಂಟೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ

ಸಾಕ್ಷಿಯನ್ನು ಪುನಃ ಮಧ್ಯಾಹ್ನ 2.45 ಗಂಟೆಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ದಿನಾಂಕಃ 18.01.2014 ರಂದು ಆಪಾದಿತನ ಮೊಬೈಲ್ ದೂರವಾಣಿ ಸಂಖ್ಯೆ 9448611195 ಮತ್ತು ಫಿರ್ಯಾದಿ ಮೊಬೈಲ್ ದೂರವಾಣಿ ಸಂಖ್ಯೆ 9480562001 ರ ಗ್ರಾಹಕರ ಹೆಸರು, ಪೂರ್ಣ ವಿಳಾಸ ಹಾಗೂ ದಿನಾಂಕ 12.09.2013 ರಿಂದ 17.09.2013 ರವರೆಗಿನ ಸಿಡಿಆರ್ ಮಾಹಿತಿಯನ್ನು ಕೇಳಿ Sub Divisional Vigilance GMEP, Karwar ರವರಿಗೆ ಪತ್ರವನ್ನು ಬರೆದಿರುತ್ತೇನೆ. ದಿಃ 18.01.2014 ರಂದು ಫಿರ್ಯಾದಿ ರಾಮಾ ಬೀರಪ್ಪ ನಾಯ್ಕ ಹಾಗೂ ಪಂಚರಾದ ದರ್ಶನ ಮತ್ತು ದಿವಾಕರ ಇವರುಗಳ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಅಕ್ಷರ ದಾಸೋಹ, ತಾಲೂಕು ಪಂಚಾಯತಿ ಕುಮಟಾದಲ್ಲಿ ಪ್ರ.ದ.ಸ ಆಗಿರುವ ರಾಕೇಶ್ವರ ಕೃಷ್ಣ ಪಟಗಾರ ಇವರಿಗೆ ಆಪಾದಿತ ಮತ್ತು ಫಿರ್ಯಾದಿಯ ಮೊಬೈಲ್ ಸಂಭಾಷಣೆಯ ಧ್ವನಿ ಸುರುಳಿಯನ್ನು ಗುರುತಿಸಿದ ಬಗ್ಗೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 21.01.2014 ರಂದು ಆಪಾದಿತ ಗಣೇಶ ಅನಂತ ನಾಯ್ಕ ಇವರ ನೇಮಕಾತಿ ಆದೇಶದ ದೃಢೀಕೃತ ಪ್ರತಿಯನ್ನು ಒದಗಿಸುವಂತೆ ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಉತ್ತರ ಕನ್ನಡ ರವರಿಗೆ ಪತ್ರವನ್ನು ಬರೆದಿರುತ್ತೇನೆ. ಅದೇ ದಿನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ, ಕುಮಟಾ ರವರಿಂದ ಸ್ಥಳದ ನಕಾಶೆಯನ್ನು ಆರು ಪ್ರತಿಯಲ್ಲಿ ಪಡೆದುಕೊಂಡಿರುತ್ತೇನೆ. ದಿನಾಂಕಃ 03.02.2014 ರಂದು ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಕಾರವಾರ ರವರಿಂದ ನೇಮಕಾತಿ ಆದೇಶದ ದೃಢೀಕೃತ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 12.02.2014 ರಂದು ಕಾರವಾರ ದೂರವಾಣಿ ಇಲಾಖೆಯಿಂದ ಎರಡು ಮೊಬೈಲ್ ಸಿಮ್ ನ ಗ್ರಾಹಕರ ಹೆಸರು ವಿಳಾಸ ಹಾಗೂ ಸಿಡಿಆರ್ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ.

ದಿನಾಂಕಃ 14.02.2014 ರಂದು ಜಿಲ್ಲಾ ಶಿಕ್ಷಣ ಅಧಿಕಾರಿ ಅಕ್ಷರ ದಾಸೋಹ, ಜಿಲ್ಲಾ ಪಂಚಾಯತ, ಕಾರವಾರ ಶ್ಯಾಮಲಾ ಟಿ ನಾಯಕ ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆಪಾದಿತರ ಸಕ್ಷಮ ಪ್ರಾಧಿಕಾರದಿಂದ ಅಭಿಯೋಜನಾ ಮಂಜೂರಾತಿ ಪಡೆಯಲು ಶಿಫಾರಸ್ಸು ಮಾಡುವಂತೆ ಕೋರಿ ಲೋಕಾಯುಕ್ತ ಇಲಾಖೆಯ ಮೇಲಾಧಿಕಾರಿಗಳಿಗೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

3. ದಿನಾಂಕಃ 22.04.2014 ರಂದು ವ್ಯವಸ್ಥಾಪನಾ ನಿರ್ದೇಶಕರು ಧಾರವಾಡ ಹಾಲು ಉತ್ಪಾದಕರ ಸಹಕಾರಿ ಸಂಘ ನಿಯಮಿತ ಇವರಿಂದ ಫಿರ್ಯಾದಿಯವರು ಹಾಲಿನ ಪುಡಿ ಸರಬರಾಜಿನ ಬಗ್ಗೆ ತಾತ್ಕಾಲಿಕ ಗುತ್ತಿಗೆ ಪಡೆದ ಬಗ್ಗೆ ಆದೇಶದ ದೃಢೀಕೃತ ಪ್ರತಿಯನ್ನು ಕೇಳಿ ಪತ್ರ ಬರೆದಿರುತ್ತೇನೆ. ದಿನಾಂಕಃ 13.05.2014 ರಂದು ಸದರಿಯವರಿಂದ ಹಾಲಿನ ಪುಡಿ ಸರಬರಾಜು ತಾತ್ಕಾಲಿಕ ಗುತ್ತಿಗೆ ಆದೇಶದ ದೃಢೀಕೃತ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 26.11.2014 ರಂದು ನನಗೆ ಕಾರವಾರ ಠಾಣೆಯಿಂದ ವರ್ಗಾವಣೆಯಾಗಿದ್ದರಿಂದ ಡಿವಾಯ್‌ಎಸ್ ಪಿ ಉಮಾ ಪ್ರಶಾಂತ ರವರಿಗೆ ಕಡತವನ್ನು ನೀಡಿರುತ್ತೇನೆ.

4. ನಾನು ಮಾಡಿದ ಸಿಡಿ ಪಂಚನಾಮೆಯನ್ನು ನೋಡಿರುತ್ತೇನೆ. ಅದನ್ನು ಈಗಾಗಲೇ ನಿಪಿ–4 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿ ಪ್ರತಿ ಪುಟದಲ್ಲಿ ನನ್ನ ರುಜು ಇದೆ. ಸಾಕ್ಷಿಯ ರುಜುವನ್ನು ಕೊನೆ ಪುಟದಲ್ಲಿ ನಿಪಿ–4(ಬಿ) ಎಂದು ಗುರುತಿಸಲಾಯಿತು. ಈಗ ನೋಡಿದ ದಾಖಲಾತಿ ನಿಪಿ–47 ನಾನು ನಕ್ಷೆ ಕೋರಿ ಬರೆದ ಪತ್ರ ಆಗಿದೆ. ಅದರಲ್ಲಿ ನನ್ನ ರುಜು ಇದೆ. ಸಾಕ್ಷಿಯ ರುಜುವನ್ನು ನಿಪಿ–47(ಎ) ಎಂದು ಗುರುತಿಸಲಾಯಿತು. ನಿಪಿ–48 ನಕ್ಷೆ ನಾನು ಸ್ವೀಕರಿಸಿರುವುದು ಆಗಿದೆ. ನಿಪಿ–48/1 ಅದರೊಂದಿಗೆ ಬರೆದ ಕವಚ ಪತ್ರ ಆಗಿದೆ. ಅದರಲ್ಲಿ ನನ್ನ

ರುಜು ಇದೆ. ಸಾಕ್ಷಿಯ ರುಜುವನ್ನು ನಿಪಿ–48/1(ಎ ) ಎಂದು ಗುರುತಿಸಲಾಯಿತು. ಈಗ ನೋಡಿದ ದಾಖಲಾತಿ ನಾನು ಸಿಡಿಆರ್ ಕೋರಿ ಬರೆದ ಪತ್ರ ಆಗಿದೆ. ಅದನ್ನು ನಿಪಿ–50 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದೆ. ಅದನ್ನು ನಿಪಿ–50(ಎ) ಎಂದು ಗುರುತಿಸಲಾಯಿತು. ಈಗ ನಾನು ಸ್ವೀಕರಿಸಿದ ಸಿಡಿಆರ್ ಮತ್ತು ಅದರ ಕವಚ ಪತ್ರ ನೋಡಿರುತ್ತೇನೆ. ಕವಚ ಪತ್ರವನ್ನು ನಿಪಿ–51 ಎಂದು ಗುರುತಿಸಲಾಯಿತು. ಅದರೊಂದಿಗೆ ಇರುವ ವಿಳಾಸದ ವಿವರ ದಾಖಲಾತಿಯನ್ನು ನಿಪಿ–51/1 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದೆ. ಅದನ್ನು ನಿಪಿ–51/1(ಎ) ಎಂದು ಗುರುತಿಸಲಾಯಿತು. ಸಿಡಿಆರ್ ದಾಖಲಾತಿಯನ್ನು ನಿಪಿ–51/2 ಎಂದು ಗುರುತಿಸಲಾಯಿತು. ಅದರಲ್ಲಿ ಎರಡು ಮೊಬೈಲ್ ಸಂಖ್ಯೆಗಳ ವಿವರ ಇದೆ. ಧಾರವಾಡ ಸಹಕಾರಿ ಹಾಲು ಒಕ್ಕೂಟ ನಿಯಮಿತ ರವರು ಬರೆದ ಪತ್ರವನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಅದನ್ನು ನಿಪಿ–52 ಎಂದು ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ–52(ಎ) ಎಂದು ಗುರುತಿಸಲಾಯಿತು. ನಿಪಿ–52/1 ಆ ಪತ್ರದೊಂದಿಗೆ ಕಳಿಸಿರುವ ತಾತ್ಕಾಲಿಕ ಗುತ್ತಿಗೆ ಆದೇಶದ ದೃಢೀಕೃತ ನಕಲು ಆಗಿದೆ. ಈಗ ಆರೋಪಿಯ ನೇಮಕಾತಿ ಆದೇಶವನ್ನು ನೋಡಿರುತ್ತೇನೆ. ಅದನ್ನು ನಿಪಿ–53 ಎಂದು ಗುರುತಿಸಲಾಯಿತು. ನಿಪಿ–53/1 ಅದರೊಂದಿಗೆ ಬಂದ ಕವಚ ಪತ್ರ ಆಗಿದೆ. ಅದರಲ್ಲಿ ನನ್ನ ರುಜು ಇದೆ. ರುಜುವನ್ನು ನಿಪಿ–53/1(ಎ) ಎಂದು ಗುರುತಿಸಲಾಯಿತು. ಈಗ ನಾನು ಸ್ವೀಕರಿಸಿದ ರಾಸಾಯನಿಕ ಪರೀಕ್ಷಾ ವರದಿ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಅದನ್ನು ನಿಪಿ–54 ಎಂದು, ಸಾಕ್ಷಿಯ ರುಜುವನ್ನು ನಿಪಿ–54(ಎ) ಎಂದು ಗುರುತಿಸಲಾಯಿತು. ಆರೋಪಿಯ ಸೇವಾ ವಿವರ ದಾಖಲಾತಿಯನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಅದನ್ನು ನಿಪಿ–55 ಎಂದು, ಸಾಕ್ಷಿಯ ರುಜುವನ್ನು ನಿಪಿ–55(ಎ) ಎಂದು ಗುರುತಿಸಲಾಯಿತು. ನಾನು ಸಹಾಯಕ ವಾಣಿಜ್ಯ ತೆರಿಗೆ ಆಯುಕ್ತರಿಗೆ ಬರೆದ ಪತ್ರವನ್ನು ಈಗ

ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಅದನ್ನು ನಿಪಿ-56 ಎಂದು, ಸಾಕ್ಷಿಯ ರುಜುವನ್ನು ನಿಪಿ-56(ಎ) ಎಂದು ಗುರುತಿಸಲಾಯಿತು. ಈಗ ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ಬರೆದ ಪತ್ರವನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಅದನ್ನು ನಿಪಿ-57 ಎಂದು, ಸಾಕ್ಷಿಯ ರುಜುವನ್ನು ನಿಪಿ-57(ಎ) ಎಂದು ಗುರುತಿಸಲಾಯಿತು. ನಾನು ಜಪ್ತು ಮಾಡಿದ ಸಿಡಿ ಈಗ ನೋಡಿರುತ್ತೇನೆ. ಅದನ್ನು ಮು.ಮಾ-11 ಎಂದು ಈಗಾಗಲೇ ಗುರುತಿಸಲಾಗಿದೆ. ಅದರ ಲಕೋಟೆ ಮೇಲೆ ನನ್ನ ರುಜು ಇದೆ. ಸಾಕ್ಷಿಯ ರುಜುವನ್ನು ಮು.ಮಾ-11(ಡಿ) ಎಂದು ಗುರುತಿಸಲಾಯಿತು.

5. ಈಗ ತೆರೆದ ನ್ಯಾಯಾಲಯದಲ್ಲಿ ಲ್ಯಾಪ್ ಟಾಪ್ ಮತ್ತು ವಿಸಿ ಮೂಲಕ ಮು.ಮಾ-11 ಸಿಡಿಯನ್ನು ಚಾಲು ಮಾಡಿ ಅದರಲ್ಲಿರುವ ಸಂಭಾಷಣೆಯನ್ನು ಕೇಳಿಸಿದ್ದು, ಅದು ನಾನು ಕೇಳಿದ ಸಂಭಾಷಣೆಯ ಸಿಡಿ ಆಗಿದೆ. ಅದರಲ್ಲಿ ಫಿರ್ಯಾದಿ ಮತ್ತು ಆರೋಪಿ ನಡುವೆ ಟ್ರ್ಯಾಪ್ ಆಗುವುದಕ್ಕೆ 4-5 ದಿನ ಮೊದಲು ಆಗಿರುವ ಸಂಭಾಷಣೆ ಇದೆ. ಅದರಲ್ಲಿ ಆರೋಪಿ ಲಂಚಕ್ಕೆ ಬೇಡಿಕೆ ಇಟ್ಟಿರುವ ಸಂಭಾಷಣೆ ಇದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ. ಸಾಕ್ಷಿಗೆ ರೂ. 500/- ಭತ್ಯೆ ಪಾವತಿ ಮಾಡಿದ್ದಾರೆ. ಪಾಟೀ ಸವಾಲನ್ನು ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ